ಗುಂಡ: ಫೇಸ್ ಬುಕ್ ಫ್ರೆಂಡ್ಸ್ ಮತ್ತು ಪಕ್ಕದ ಮನೆಯಲ್ಲಿ ಬೇಯುತ್ತಿರುವ ಚಿಕನ್ ಬಿರಿಯಾನಿ ಎರಡೂ ಒಂದೇ ಕಣಯ್ಯಾ...
ಪುಂಡ: ಅದು ಹೇಗೆ?
ಗುಂಡ: ಎರಡೂ ಗಾಳಿಯಲ್ಲಿ ತೇಲಿ ಬರುವ ಪರಿಮಳ ಮಾತ್ರ!

ಪೆಟ್ರೋಲ್ ಬಂಕ್‌ನ ಸೂಚನಾಫಲಕದಲ್ಲಿ, 'ಇಲ್ಲಿ ಧೂಮಪಾನ ಮಾಡಬಾರದು' ಎನ್ನುವ ಸೂಚನೆ ಬರೆಯಲಾಗಿತ್ತು. ಪುಂಡ ಅದನ್ನು ಓದಿ, 'ನನಗೇನೂ ಜೀವದ ಹಂಗಿಲ್ಲ' ಎಂದು ಉದ್ಧಟತನ ತೋರಿದ.
ಆಗ ಪೆಟ್ರೋಲ್ ಬಂಕ್‌ನ ಮಾಲೀಕರು, 'ನಿಮಗೆ ನಿಮ್ಮ ಜೀವದ ಬೆಲೆ ತಿಳಿದಿದೆಯೋ ಇಲ್ಲವೋ ಗೊತ್ತಿಲ್ಲ ಆದರೆ ನಮಗೆ ನಮ್ಮ ಪೆಟ್ರೋಲಿನ ಬೆಲೆ ಚೆನ್ನಾಗಿ ತಿಳಿದಿದೆ ಸ್ವಾಮಿ' ಎನ್ನುತ್ತಾ ಅಲ್ಲಿಂದ ಆತನನ್ನು ಅಟ್ಟಿಸಿದರು!

ಫೇಸ್‌ಬುಕ್ ನಿರತ ಲಲನೆಯರಿಗಾಗಿ ಗುಂಡನ ಸಲಹೆ, 'ನೀವು ಹಾಕುವ ಪ್ರೊಫೈಲ್ ಫೋಟೊ, ಪೋಸ್ಟ್ ಮಾಡುವ ಸೆಲ್ಫೀ ಫೋಟೋಗಳಿಗೆ ಕ್ಯೂಟ್, ಬ್ಯೂಟಿಫುಲ್ ಎಂದೆಲ್ಲಾ ಕಾಮೆಂಟ್ ಬರೆದು ಲೈಕ್ ಮಾಡುವವರು ಸುಮ್ ಸುಮ್ಮನೆ ನಿಮ್ಮನ್ನು ಹೊಗಳಿ ಅಟ್ಟಕ್ಕೇರಿಸುತ್ತಿದ್ದಾರೆ. ಯಾವುದಕ್ಕೂ ನೀವು ಕನ್ನಡಿ ನೋಡುತ್ತಾ ಇರಿ'!

ಸಂದರ್ಶಕ: ನೀವೇಕೆ ಮದುವೆ ಮಾಡಿ ಕೊಂಡಿರಿ?
ಪತಿ: ಹಾಗೆಯೇ ಷೋಕಿಗಾಗಿ...
ಸಂದರ್ಶಕ: ಹಾಗಾದರೆ ನೀವೇಕೆ ಮದುವೆ ಮಾಡಿ ಕೊಂಡಿರಿ ಮೇಡಂ?
ಪತಿ: ಇವರ ಷೋಕಿ ಬಿಡಿಸಲಿಕ್ಕಾಗಿ...!



ಊಟದ ಟೇಬಲ್ ಮೇಲೆ ಊಟ ಮಾಡುತ್ತಾ ಪತಿ ಕೂಗಿ ಹೇಳಿದ, 'ಏನೇ ಕಣೇ, ನಿನ್ನ ಮೊಬೈಲಿನ ನೆಟ್ ಬಂದ್ ಆಗಿದೆಯಾ'?
ಪತ್ನಿ: ಇಲ್ಲರೀ... ಯಾಕೆ?
ಪತಿ: ಸ್ವಲ್ಪ ಪಲ್ಯ ಹಾಕಲು ವಾಟ್ಸಪ್‌ನಲ್ಲಿ ಮೆಸೇಜ್ ಕಳಿಸಿ ತುಂಬಾ ಹೊತ್ತಾಯ್ತು, ಪಲ್ಯ ಬರಲೇ ಇಲ್ಲ ಅದ್ಕೆ ಕೇಳಿದೆ ಕಣೇ!

ಹಿಂದಿನ ಕಾಲದಲ್ಲಿ ಅಂಗಡಿಗಳಲ್ಲಿ, 'ಗ್ರಾಹಕರೇ ದೇವರು' ಎಂಬುದಾಗಿ ಫಲಕಗಳ ಮೇಲೆ ಬರೆಸಿ ತೂಗು ಹಾಕಿರುವ ಸೂಚನಾಫಲಕಗಳನ್ನು ನೋಡಿದಾಗಲೆಲ್ಲಾ ನಾವೇ ಭಗವಂತರಾದಂತಹ ಭಾವನೆ ಉದಿಸುತ್ತಿತ್ತು.
ಆದರೆ ಈಗ ಶಾಪಿಂಗ್ ಮಾಲ್ ಗಳಲ್ಲಿ ಅಲ್ಲಲ್ಲಿ ಬರೆದು ಹಾಕಿರುವ, 'ನೀವು ಸಿ.ಸಿ.ಟಿ.ವಿಯ ಕ್ಯಾಮೆರಾ ಕಣ್ಣುಗಳ ಸುಪರ್ದಿಯೊಳಗಿದ್ದೀರಿ' ಎನ್ನುವ ಎಚ್ಚರಿಕೆಯ ಸಾಲುಗಳನ್ನು ಗಮನಿಸಿದಾಗೆಲ್ಲಾ 'ನಾವು ಕಳ್ಳಕಾಕರೇನೋ..' ಎಂಬಂತಹ ಸಂಶಯ ನಮ್ಮೊಳಗೇ ಮೂಡಲಾರಂಭಿಸುತ್ತಿದೆ!

ರಾತ್ರಿ ಹತ್ತೂವರೆಗೆ ಗುಂಡ ತನ್ನ ವಿಜ್ಞಾನಿ ಮಿತ್ರನಿಗೆ ಫೋನಾಯಿಸಿದಾಗ ಮಿತ್ರ ತಾನು ತುಂಬಾ ಬ್ಯುಸಿಯಾಗಿರುವುದಾಗಿ ತಿಳಿಸಿದ. ಕಾರಣವೇನೆಂದು ಗುಂಡ ಕೇಳಿದ. ಅದಕ್ಕೆ ಆತ ತಾನು 'ಸ್ಟೀಲ್, ಅಲ್ಯುಮಿನಿಯಂ, ಪಿಂಗಾಣಿ ಇತ್ಯಾದಿ ಲೋಹ ಮತ್ತಿತರ ಗಟ್ಟಿ ಪದಾರ್ಥಗಳನ್ನು ನಿರ್ಬಂಧಿತ ವಾತಾವರಣದಲ್ಲಿ ದ್ರವಉಷ್ಣ ಉಪಚಾರಕ್ಕೆ ಒಳಪಡಿಸುವ ವಿಶೇಷ ಯೋಜನೆ'ಯಲ್ಲಿ ಕಾರ್ಯನಿರತನಾಗಿರುವುದಾಗಿ ವಿವರಿಸಿದ. ಆ ಕ್ಷಣ ಗುಂಡನಿಗೆ ತನ್ನ ಮಿತ್ರನ ಬಗ್ಗೆ ಅತೀವ ಹೆಮ್ಮೆಯೆನಿಸಿತು.
ಆದರೆ ಆನಂತರ ತಿಳಿದುಬಂದ ವಿಷಯದ ಪ್ರಕಾರ ಆ ವೇಳೆಯಲ್ಲಿ ಮಿತ್ರ ತನ್ನ ಪತ್ನಿಯ ಮೇಲುಸ್ತುವಾರಿಯಲ್ಲಿ ಅಡುಗೆ ಕೋಣೆಯ ವಾಶ್ ಬೇಸಿನ್ ನಲ್ಲಿ ಬಿಸಿನೀರು ಬಳಸಿ ಪಾತ್ರೆ ತೊಳೆಯುತ್ತಿದ್ದ!

ರಜಾದಿನ ಮುಂಜಾನೆ ಗಂಟೆ ಏಳಾದರೂ ಹಾಸಿಗೆಯಿಂದೇಳದಿರುವ ಪತಿರಾಯನನ್ನು ಎಚ್ಚರಿಸುತ್ತಾ ಪತ್ನಿ ಹೇಳಿದಳು, 'ರೀ, ಎದ್ದೇಳ್ರೀ... ನಾನು ಚಪಾತಿ ಮಾಡುತ್ತಿದ್ದೇನೆ.' ಮಲಗಿದ್ದಲ್ಲಿಂದಲೇ ಪತಿ ಆಕ್ಷೇಪಣೆಯ ದನಿಯಲ್ಲಿ ಉಲ್ಲೇಖಿಸಿದ, 'ನೀನು ಚಪಾತಿ ಮಾಡು ಕಣೆ... ನಾನೇನು, ಚಪಾತಿಯ ಕಾವಲಿಯ ಮೇಲೆ ಮಲಗಿದ್ದೀನಾ'?

ಪತಿ: ಲೇ.. ಒಂದು ಹತ್ತು ನಿಮಿಷದ ಮಟ್ಟಿಗೆ ನಾನು ಹೊರಗಡೆ ಹೋಗುತ್ತಿದ್ದೇನೆ, ನಿನಗೇನಾದರೂ ಬೇಕಿತ್ತೆ?
ಪತ್ನಿ: ನನಗಷ್ಟೇ ಸಾಕು, ಬೇರೆ ಏನೂ ಬೇಕಾಗಿಲ್ಲ!

(ಸಂಗ್ರಹ) ರಮಣ್ ಶೆಟ್ಟಿ ರೆಂಜಾಳ್, ಮುಂಬೈ

